7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟು ಅವನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ ತಾರೀಖು ಲಾಗಾಯ್ತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಒದ್ದಾವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಪ್ರಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ಸ್ಟ್ಯಾಂಪ್ ಸಹಿತವಾದ ಬಾಕಿ ಮೊಬಲಗು.
1	2	3	4	5	6	7	8	9	10	11
				ರೂ. ಆ. ಪೈ.				ಎಕರೆ. ಗುಂಟೆ.	ರೂ. ಆ. ಪೈ.	ರೂ. ಆ. ಪೈ.
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	ಜೋಡಿ ಮೊನ್ನೇನಹಳ್ಳಿ ಗ್ರಾಮ.	ಹನುಮಂತಾಚಾರ್ಯ ವಗೈರೆ	.. .. ..		ಗ್ರಾಮದಲ್ಲಿ ಬಾಕಿದಾರ್ಗೆ ಇರುವ ಹೊಲಗಳು.	ಖುಷ್ಕೀ ತರೀ ಬಾಗಾಯತು ಪರಂಪೋಕು	299 11 20 13 38 26 78 20	596 4 0	96 0 5
							ಟೋಟಲ್	436 30		ನೋಟಿಸ್ ಫೀ ವಗೈರೆ 0–12–0
							ಸಾಲಿನಾ ಸರ್ಕಾರಕ್ಕೆ ಕೊಡತಕ್ಕ ಜೋಡಿ	.. ..	ನೀರ್ ಸರದಿ .. 136 0 0	96–12–5 ಹರಾಜ್ ತಾರೀಕ್ ವರಿಗೆ ಬಡ್ಡಿ ಕೊಡಬೇಕು.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 3ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ ೧೮೯೬–97ನೇ ಸಾಲಿಗೆ, ಅಂದರೆ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂ ವರಿಗೆ, ತುಮಕೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮೀನಿಸತಕ್ಕ ಹಕ್ಕನ್ನ ತುಮಕೂರು ತಾಲ್ಲೂಕು ಕಛೇರಿಯಲ್ಲಿ 1896ನೇ ಸೆಪ್ಟಂಬರ್ 4ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರು, ಅಥವಾ ಶಿರಸ್ತೇದಾರು, ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಆಥವಾ ವಿಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ವಿಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡೆದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು.

5. ಚಡಸವಾಲ್ದಾರು, ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳ ಒಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆ ಯಂತೆ ಆಗುವ ಲೋಕಲ್ ಸೆಸ್ ದೇಬೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟು ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಇಜಾರ್ದಾರು, ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು, ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಆಥವಾ ಇಜಾರೆದಾರು, ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರು, ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರ್ದಾರ್ರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿಲ್ಲದ ಜಮೀನುಗಳನ್ನ ಸರ್ಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇಲ್ಲ ಪರಂತು ಆಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜವಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರು, ಆಗಿಯಕೂಡದು. ಬಂದು ವೇಳೆ ಆಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗಣಿಗಳನ್ನು ಮುಚ್ಚಿಸರಪಡಿಸಬೇಕು.

10. ಕಲ್ಲುಗಳು ಜವಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರ್ರಿಂದ ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರು, ಸಾಗಿಸ ಕೂಡದು.

ತಾರೀಖು 3ನೇ ಆಗಸ್ಟ್ ೧೮೯೬.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸ್ ೧೮೯೬–97ನೇ ಸಾಲಿಗೆ ಅಂದರೆ, 1896ನೇ ಜುಲೈ 1ನೇ ತಾರೀಖು ಲಾಗಾಯತು 1897ನೇ ಜೂನ್ 30ನೇ ತಾರೀಖು ವರಿಗೆ ಈ ಕೆಳಗೆ ನಮೂದಾಗುವ ತಿಪಟೂರು ಮತ್ತು ಪಾವಗಡ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟ ಫಾರೆನ್ಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರಿ ಬಂಜರ್ ಜಮೀನುಗಳಲ್ಲಿಯೂ ಮತ್ತು ಅವ್ಯತಮಹಲ್ ಕಾವಲ್ಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸಿಗಳನ್ನು ಜವಾಯಿಸಿಕೊಳ್ಳುವ ಹಕ್ಕುದಾರಿಯನ್ನ ಅಮಲ್ದಾರ್ರ ರೂಬರೂಬ್ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜ್ ಮಾಡಲ್ಪಡುತ್ತೆ. ಹರಾಜ್ ಮಧ್ಯಾಹ್ನ 11 ಘಂಟೆಗೆ ಷುರು ಆಗುತ್ತೆ. ಹರಾಜ್ ತುಮಕೂರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

ತಾಲ್ಲೂಕು.	ಪಸಾರೇ ಜಿನಸಿ.		ತಾರೀಖು.	ಸ್ಥಳ.
ತಿಪಟೂರು.	ಪೆನ್ನಾಯಕನಹಳ್ಳಿ, ಈರ್ಲಗೆರೆ, ಚಿಕ್ಕಮಾರ್ಪನ ಹಳ್ಳಿ, ಕಡೇಹಳ್ಳಿ ಕಾವಲ್, ಕೆಂಚವೀರನಹಳ್ಳಿ, ಅದಿನಾಯಕನಹಳ್ಳಿ, ಲಕ್ಷ್ಮೀಪುರ ಈ ಗ್ರಾಮಗಳಲ್ಲಿರತಕ್ಕ ಅಳಲೇಕಾಯಿ. ಬೀದರಗುಡಿ, ಲಕ್ಕಿಹಳ್ಳಿ ಕಾವಲ್, ಹೊಂಗಲಹಳ್ಳೀ ಕಾವಲ್, ಈಚನೂರ ಕಾವಲ್, ಹಾಲ್ತರಿಕೆ ಕಾವಲ್ಗಳಲ್ಲಿರುವ, 1 ತಾರೆಕಾಯಿ 2 ದಿಂಡಗದ ಗೋಂದು 3 ಕಪಿಲಾರಂಗು 4 ಹೊಂಗೇಬೀಜ 5 ತಂಗಡಿವ್ಯಾಣ 6 ಬ್ಯಾಲದಕಾಯಿ 7 ಪತಂಗೆ		1896ನೇ ಸೆಪ್ಟಂಬರ್ 5ನೇ ತಾರೀಖು.	ತಿಪಟೂರು.
ಪಾವಗಡ	1 ಜೇನುತುಪ್ಪ 2 ಕಲ್ಲುಹುವ್ವು 3 ಅಳಲೇಕಾಯಿ	4 ತಗರಸಿಬೀಜ 5 ಮಾಡಿಚಕ್ಕೆ 6 ಶೀತಾಫಲ	1896ನೇ ಸೆಪ್ಟಂಬರ್ 8ನೇ ತಾರೀಖು.	ಪಾವಗಡ.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟುತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್ಸೆಸ್ ವಸೂಲ್ಮಾಡಲ್ಪಡುವದು.

3. ಕ್ಲಿಪ್ತ ಕಾಲದ ವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೇವಣಾತಿ ಇಟ್ಟು ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಭಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್, ಡೆಪ್ಯೂಟಿ ಕಮ್ಮಿಷನರ್.